ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 25.07.2026

ಮುಂದುವರೆದ ಪಾಟೀಸವಾಲು **3** ರಿಂದ **7** ನೇ ಪ್ರತಿವಾದಿಯರ ಪರ ಶ್ರೀ ಎಂ ಎಂ ಎಂ ವಕೀಲರಿಂದಃ

ನನ್ನ ಗಂಡು ಅಜ್ಜನ ಹೆಸರು ಕನಕನಗೌಡ. ಸದರಿ ಕನಕನಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ. ನಾನು ಕನಕನಗೌಡರನ್ನು ನೋಡಿರುವುದಿಲ್ಲ. ಸದರಿ ಕನಕಗೌಡರಿಗೆ ಒಬ್ಬಳೆ ಮಗಳು ಜಾಲಮ್ಮ ಇರುತ್ತಾರೆ. ಜಾಲಮ್ಮಳ ಗಂಡನ ಹೆಸರು ಮಾಸಪ್ಪ. ಮಾಸಪ್ಪನ ತಂದೆ ಹೆಸರು ನನಗೆ ಗೊತ್ತಿಲ್ಲ. ಮಾಸಪ್ಪನಿಗೆ 4 ಜನ ಅಣ್ಣತಮ್ಮಂದಿರು ಇರುತ್ತಾರೆ. ಅವರೆಂದರೆ ಗುಡಿಯಪ್ಪ , ಮಾಸಪ್ಪ , ಕಪಲಪ್ಪ , ಮುಡಿಯಪ್ಪ ಇರುತ್ತಾರೆ.

ನಮ್ಮ ಮನೆತನ ಅಡ್ಡ ಹೆಸರು ಪೂಜಾರಿ ಇರುತ್ತದೆ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಗಂಡು ಮಕ್ಕಳು ಇರುತ್ತೇವೆ. ಅವರೆಂದರೆ ನಾನು , ಗ್ಯಾನಪ್ಪ ಇರುತ್ತೇವೆ. ಗ್ಯಾನಪ್ಪ ಮರಣಹೊಂದಿರುತ್ತಾರೆ. ಗ್ಯಾನಪ್ಪನ ಹೆಂಡತಿ ಹೆಸರು ಶರಣವ್ವ ಇರುತ್ತವೆ. ಗ್ಯಾನಪ್ಪನಿಗೆ ಒಬ್ಬಳೆ ಹೆಂಡತಿ ಇರುತ್ತಾರೆ. ನನ್ನ ತಕರಾರು ಸಲ್ಲಿಸುವ ಕಾಲಕ್ಕೆ ಗ್ಯಾನಪ್ಪನಿಗೆ ಇಬ್ಬರು ಹೆಂಡತಿಯರು ಎಂದು ನಾನು ವಕೀಲರಿಗೆ ಹೇಳಿರುವುದಿಲ್ಲ. ಗ್ಯಾನಪ್ಪನಿಗೆ ಇಬ್ಬರು ಹೆಂಡತಿಯರು ಎಂದು ನನ್ನ ತಕರಾರಿನಲ್ಲಿ ಹೇಳಿದ್ದರು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ಯಾನಪ್ಪನಿಗೆ ಮಕ್ಕಳು ಇರುವುದಿಲ್ಲ. ಗ್ಯಾನಪ್ಪನಿಗೆ ಅಶ್ವಿನಿ , ಶಿಲ್ಪಾ , ಯಮನೂರ ಎಂಬ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗ್ಯಾನಪ್ಪನಿಗೆ 2 ನೇ ಹೆಂಡತಿ ಮಾಸವ್ವ ಇದ್ದು ಅವರಿಗೆ ಮೇಲ್ಕಂಡಂತೆ ಮೂವರು ಮಕ್ಕಳು ಇರುತ್ತಾರೆ ಎಂದು ನನ್ನ ತಕರಾರಿನಲ್ಲಿ ಹೇಳಿ ಬರೆಸಿದ್ದರೂ ಕೂಡಾ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಸದರಿ ಮಾಸವ್ವಳು ಕನಕಗೌಡ ತಂದೆ ಭೀಮನಗೌಡರ ಮಗಳು ಎಂದರೆ ಸರಿಯಲ್ಲ.

ಭೀಮನಗೌಡ ತಂದೆ ಕನಕನಗೌಡ ರವರು ಮೂಲತಹಃ ಗೋರೆಬಾಳದವರಾದರು ಬಾಲವ್ವಳ ಮೊಮ್ಮಗಳಾದ ಮಾಸವ್ವಳನ್ನು ಮದುವೆ ನಂತರ ಕಬ್ಬರಗಿಗೆ ಬಂದು ವಾಸ ಇದ್ದುದರಿಂದ ಅವರ ತಂದೆ ಹೆಸರು ಕನಕನಗೌಡ ಎಂದು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಭೀಮನಗೌಡ ತಂದೆ ಕನಕನಗೌಡ ಸಾಃ ಗೋರೆಬಾಳ ಎಂದು ನಮ್ಮ ತಕರಾರಿನಲ್ಲಿ ಎಂದು ಹೇಳಿರುತ್ತೇನೆ.

ಸರ್ವೆ ನಂ. 84 ಹಿಸ್ಸಾ 1 ರ ಜಮೀನನ್ನು ಗದ್ದಿ ಹೊಲ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ಜಮೀನನ್ನು ಮೂಲ ಮಾಲೀಕರಾದ ಬಾಲವ್ವರಿಂದ ಮಾಸಪ್ಪ ತಂದೆ ಯಲ್ಲಪ್ಪ ವಜ್ಜಲ ರವರು 1959 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅಂದಿನಿಂದಲೂ ಮಾಸಪ್ಪ ತಂದೆ ಯಲ್ಲಪ್ಪ ವಜ್ಜಲರವರು ಮಾಲೀಕರಾಗಿ ಸ್ವಾಧೀನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಕುರಿತು ನನಗೆ ಸಂಪೂರ್ಣ ಮಾಹಿತಿ ಇದ್ದರು ಕೂಡಾ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಕಬ್ಬರಗಿ ಸರ್ವೆ ನಂ. 9 ಹಿಸ್ಸಾ ಅ ವಿಸ್ತೀರ್ಣ 10 ಎಕರೆ 26 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 1987 ರಲ್ಲಿ ಮೌಖಿಕ ಪಾಲು ವಿಭಾಗದಂತೆ ಮಾಸನಗೌಡರ ಕುಟುಂಬಕ್ಕೆ 5 ಎಕರೆ 13 ಗುಂಟೆ , ಕನಕನಗೌಡರ ಕುಟುಂಬಕ್ಕೆ 5 ಎಕರೆ 13 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಭಾಗ ಪಡೆದವರ ಹೆಸರಿನಲ್ಲಿ ದಾಖಲೆಗಳಾಗಿದ್ದು ಅವರೆ ಪ್ರತ್ಯೇಕವಾಗಿ

ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಕುರಿತು ನನಗೆ ಮಾಹಿತಿ ಇದ್ದರು ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಬ್ಬರಗಿಯ ಶಿವಪ್ಪ ಗಟ್ಟನೂರ ರವರ ಪರಿಚಯ ಇರುತ್ತದೆ. ಸದರಿ ಶಿವಪ್ಪ ಗಟ್ಟನೂರರವರು ಮಾಸನಗೌಡರವರಿಂದ ಜಮೀನು ಖರೀದಿ ಹಿಡಿದಿದ್ದರು ಎಂದರೆ ಸರಿಯಲ್ಲ. ಶಿವಪ್ಪ ಗಟ್ಟನೂರರವರಿಂದ ಬೊಮ್ಮಯ್ಯ ರವರು ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೇ ಸ್ವಾಧೀನ ಮಾಡುತ್ತಿದ್ದೆವೆ ಎಂದು ನುಡಿದಿರುತ್ತಾರೆ. ಶಿವಪ್ಪ ಗಟ್ಟನೂರರವರು ಸ್ವಾಧೀನದಲ್ಲಿದ್ದು ಅವರಿಂದ ಖರೀದಿ ಮಾಡಿದ ನಂತರ ಬೊಮ್ಮಯ್ಯರವರು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರೂ ಕೂಡಾ ನಾವು ಸ್ವಾಧೀನದಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯಿಂದ ನಮ್ಮ ಕುಟುಂಬಕ್ಕೆ 5 ಎಕರೆ ಜಮೀನು ಬಂದಿರುತ್ತದೆ. ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ಗ್ಯಾನಪ್ಪನ ಹೆಂಡತಿ ಶರಣವ್ವಳು ಕಬ್ಬರಗಿ ಗ್ರಾಮದವರು ಎಂದರೆ ಸರಿ. ಸದರಿ ಶರಣವ್ವಳು ವಿವಾಹವಾದ ನಂತರ ನನ್ನ ತಮ್ಮನೊಂದಗಿ ಸರಿಯಾಗಿ ಜೀವನ ಮಾಡಲಿಲ್ಲ ಎಂದರೆ ಸರಿಯಲ್ಲ. ಆಗ ನನ್ನ ತಾಯಿ ಮಾಸವ್ವಳ ತಂದೆ ಕನಕನಗೌಡರ ಬಳಿ ಬಂದು ಮಾಸವ್ವಳನ್ನು ಗಾನಪ್ಪನಿಗೆ ಮದುವೆ ಮಾಡಿಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ಆ ರೀತಿ ಮದುವೆ ಮಾಡಿಕೊಂಡಲ್ಲಿ ಸರ್ವೆ ನಂ. 21 ಹಿಸ್ಸಾ 1 ವಿಸ್ತೀರ್ಣ 6 ಎಕರೆ 25 ಗುಂಟೆ ಜಮೀನನ್ನು ಕನಕನಗೌಡರ ಮಗಳ ಹೆಸರಿನಲ್ಲಿ ಮಾಡುವುದಾಗಿ ನನ್ನ ತಾಯಿ ಹೇಳಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದ ಮಾಸವ್ವಳ ತಂದೆ ಮಾಸವ್ವಳನ್ನು ನನ್ನ ತಮ್ಮ ಗ್ಯಾನಪ್ಪನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ಶರಣವ್ವಳು ನನ್ನ ತಮ್ಮನ ವಿರುದ್ದ ಕ್ರಿ.ಮಿಸ ನಂ. 39/98 ರಂತೆ ಪ್ರಕರಣ

ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ರಾಜಿ ಆಗಿ ಶರಣವ್ವಳು ನನ್ನ ತಮ್ಮನಿಂದ ರೂ. 45 ಸಾವಿರ ಗಳನ್ನು ಶಾಶ್ವತ ಜೀವನಾಂಶವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿ ಸಲ್ಲಿಸಿ ರಾಜೀ ಆಗಿದ್ದರೂ ಕೂಡಾ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಪಡೆದು ವಿಚ್ಛೇದನ ನೀಡದೆ ಇದ್ದುದರಿಂದ ನನ್ನ ಸಹೋದರ ಶರಣವ್ವಳ ವಿರುದ್ದ ಎಂ ಸಿ ನಂ. 2/1998 ರಂತೆ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ನನ್ನ ತಮ್ಮ ಗ್ಯಾನಪ್ಪ ಮತ್ತು ಶರಣವ್ವ ವಿವಾಹ ವಿಚ್ಛೇದನ ಮಾಡಿಕೊಳ್ಳಲು ರಾಜೀ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 22.08.2016 ರಂದು ಕಂದಾಯ ಅಧಿಕಾರಿಗಳಿಗೆ ಶರಣವ್ವ ನಮ್ಮ ಕುಟುಂಬಕ್ಕೆ ಸಂಬಂದ ಇಲ್ಲದೆ ಇರುವುದರಿಂದ ಮತ್ತು ಸದರಿ ಶರಣವ್ವಳು ರೂ 45 ಸಾವಿರ ಹಣ ಪಡೆದು ವಿವಾಹ ವಿಚ್ಛೇದನ ಪಡೆದುಕೊಂಡಿರುತ್ತಾರೆ ಎಂದು ಅರ್ಜಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಮ್ಮನ ಮಕ್ಕಳ ಭಾಗದ ಜಮೀನನ್ನು ಪಡೆದುಕೊಳ್ಳುವ ಸಲುವಾಗಿ ನನ್ನ ತಮ್ಮನಿಗೆ ಮಕ್ಕಳು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಊರ ಮದ್ಯೆದಲ್ಲಿನ ಮನೆಯಲ್ಲಿದ್ದು , ನನ್ನ ತಮ್ಮ ಊರ ಹೊರಗಿನ ಹಿತ್ತಲ ಮನೆಯವರ ಓಣಿಯಲ್ಲಿನ ಮನೆಯಲ್ಲಿ ಬಾಡಿಗೆ ಇದ್ದರು ಎಂದರೆ ಸಾಕ್ಷಿಯು ಅದು ನಮ್ಮ ಮನೆ ಇದ್ದು ಅದರಲ್ಲಿ ಇದ್ದರು ಎಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ತಮ್ಮ ಪ್ರತ್ಯೇಕವಾಗಿ ಮೇಲ್ಕಂಡ ಮನೆಗಳಲ್ಲಿ ವಾಸ ಇದ್ದೆವು ಎಂದರೆ ಸರಿ ಸಾಕ್ಷಿ ಮುಂದುವರೆದು ನಾವೆಲ್ಲ ಒಟ್ಟಿಗೆ ಇದ್ದೆವು ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ನನ್ನ ತಾಯಿ ಗ್ಯಾನಪ್ಪನ ಮನೆಯಲ್ಲಿ

ಅವರೊಂದಿಗೆ ವಾಸ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಿರಿಯ ಮಗನಾಗಿದ್ದರಿಂದ ನನ್ನೊಂದಿಗೆ ವಾಸ ಇದ್ದರು ಎಂದು ನುಡಿದಿರುತ್ತಾರೆ.

ಸರ್ವೆ ನಂ. 21 ಹಿಸ್ಸಾ 1 ವಿಸ್ತೀರ್ಣ 6 ಎಕರೆ 25 ಗುಂಟೆ ಜಮೀನನ್ನು ತನ್ನ ಮಗಳ ಹೆಸರಿಗೆ ಮಾಡಿಕೊಡುವಂತೆ ಕನಕನಗೌಡ ಕೇಳಿದಾಗ ಗ್ಯಾನಪ್ಪ ಮತ್ತು ಶರಣವ್ವಳ ಮದ್ಯೆದ ವಿವಾದ ಬಗೆಹರಿದ ನಂತರ ಮಾಡಿಕೊಡುವುದಾಗಿ ನನ್ನ ತಾಯಿ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ನನ್ನ ಸಹೋದರ ಗ್ಯಾನಪ್ಪ ಅನಾರೋಗ್ಯದಿಂದ ಮರಣಹೊಂದಿದರು ಎಂದರೆ ಸರಿ. ಆ ಕಾರಣದಿಂದ ನನ್ನ ತಾಯಿ ಚಿಂತೆ ಹಚ್ಚಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹಿರಿಯ ಮಗನ ಬಳಿ ಇದ್ದರು ಎಂದು ನುಡಿದಿರುತ್ತಾರೆ. ನನ್ನ ಹಿರಿಯ ಮಗನ ಹೆಸರು ಮಾಸಪ್ಪ , ಅವರ ಹೆಂಡತಿಯ ತವರು ಮನೆ ಬೆನಕನಾಳ ಇರುತ್ತದೆ. ನನ್ನ ಮಗ ಮಾಸಪ್ಪ ಬೆನಕನಾಳನಲ್ಲಿ ವಾಸ ಇರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಬ್ಬರಗಿಯಲ್ಲಿ ವಾಸ ಇರುತ್ತಾನೆ ಎಂದು ನುಡಿದಿರುತ್ತಾರೆ. ಅವರ ವಿವಾಹವಾಗಿ 5 ವರ್ಷ ಆಗಿರುತ್ತದೆ. ನನ್ನ ಮಗನ ವಿವಾಹವಾದ ಕಾಲದಿಂದಲೂ ಅವರು ಬೆನಕನಾಳನ ನನ್ನ ಹೆಂಡತಿಯ ಅಣ್ಣನ ಮನೆಯಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಾಯಿ ಯಾವತ್ತೂ ನನ್ನ ಮಗ ಮಾಸಪ್ಪನೊಂದಿಗೆ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಗ್ಯಾನಪ್ಪನ ಹೆಂಡತಿ ಮಾಸವ್ವ ನನ್ನ ತಾಯಿಯನ್ನು ಮರಣಕಾಲದವರೆಗೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನೊಡಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಮಾಸವ್ವಳ ಮನೆಯಲ್ಲಿದ್ದಾಗ ನನ್ನ ತಾಯಿ ಅನಾರೋಗ್ಯಕ್ಕೆ ಇಡಾಗಿದ್ದು ಆಗ ನನ್ನ ಹೆಂಡತಿ ನನ್ನ ತಾಯಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ಊಟ ಹಾಕದೆ ಇದ್ದುದರಿಂದ ನನ್ನ ತಾಯಿ

ನಮ್ಮ ಮನೆಗೆ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಹಿಂದಿನ ಮಾತುಕತೆಯಂತೆ 4 ನೇ ದಾವಾ ಆಸ್ತಿಯನ್ನು ನನ್ನ ತಮ್ಮನ ಹೆಂಡತಿ ಹೆಸರಿಗೆ ಮಾಡಿಕೊಡುತ್ತಾರೆ ಎಂಬ ಭಯದಿಂದ ನನ್ನ ಹೆಂಡತಿ ಬಲವಂತದಿಂದ ನನ್ನ ತಾಯಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಗಳಲ್ಲಿ ಸ್ವಾಧೀನದಲ್ಲಿರುವ ಕುರಿತು ಗೇಣಿ , ಭೂ ಹಿಡುವಳಿ , ಸಾಗುವಳಿ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪಟ್ಟಾ ಪುಸ್ತಕವನ್ನು ವಕೀಲರ ಬಳಿ ನೀಡಿರುತ್ತೇನೆ.

ನಿಡಿ-89 ರ ದಾಖಲಾತಿಯ ಪೋಟೋದಲ್ಲಿರುವ ವ್ಯಕ್ತಿ ಕನಕನಗೌಡ ಇರುತ್ತಾರೆ ಎಂದರೆ ಸರಿಯಲ್ಲ. ಮಾಸನಗೌಡ ತಂದೆ ಕನಕನಗೌಡರನ್ನು ನಾನು ನೋಡಿರುತ್ತೇನೆ. ನಿಡಿ-89 ರಲ್ಲಿರುವ ವ್ಯಕ್ತಿಯೇ ಮಾಸನಗೌಡರ ತಂದೆ ಕನಕನಗೌಡರ ಎಂದರೆ ಸರಿಯಲ್ಲ. ವಾದಿಯ ತಂದೆ ಮಾಸನಗೌಡರನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಮಾಸನಗೌಡರ ಚುನಾವಣಾ ಗುರುತಿನ ಚೀಟಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ವ್ಯಕ್ತಿಯು ಮಾಸನಗೌಡ ಅಲ್ಲ ಎಂದು ಹೇಳುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಪೋಟೋದಲ್ಲಿರುವ ವ್ಯಕ್ತಿ ಮಾಸನಗೌಡ ಇದ್ದರು ಕೂಡಾ ನಾನು ಅವರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಶಂಕ್ರವ್ವ ಮತ್ತು ಲಕ್ಷ್ಮಣಗೌಡ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಶಂಕ್ರವ್ವ ಗಂಡ ಕನಕನಗೌಡ ನಮ್ಮ ಮನೆಯ ಎದುರಿನಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಶಂಕ್ರವ್ವಳ ಕುಟುಂಬದ ಪಡೀತರ ಚೀಟಿಯನ್ನು ತೋರಿಸಿದ್ದು ಅದರಲ್ಲಿನ ಪೋಟೋದಲ್ಲಿರುವ ಮಹಿಳೆ ಶಂಕ್ರವ್ವ ಇರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ

ನಾನು ಹೇಗೆ ಹೇಳಲಿ ಎಂದು ನುಡಿದಿರುತ್ತಾರೆ. 7 ನೇ ಪ್ರತಿವಾದಿ ಮಾಸನಗೌಡ ಪರಿಚಯ ನನಗೆ ಇರುವುದಿಲ್ಲ. ವಾದಿ ಲಕ್ಷ್ಮಣಗೌಡರ ಪರಿಚಯ ನನಗೆ ಇರುವುದಿಲ್ಲ. ಕನಕಗೌಡರ ಕುಟುಂಬದ ಪಡೀತರ ಚೀಟಿಯಲ್ಲಿನ ವ್ಯಕ್ತಿಗಳು ನನಗೆ ಗೊತ್ತಿದ್ದರು ಕೂಡಾ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ರಿಂದ 6 ದಾವಾ ಸ್ವತ್ತುಗಳಿಗೂ ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ವಂಶವೃಕ್ಷವನ್ನು ತೋರಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಲಕ್ಷ್ಮಣಗೌಡ ರ ಮದ್ಯೆ ಕೊಪ್ಪಳ ನ್ಯಾಯಾಲಯದಲ್ಲಿ ಎದುರು ಕ್ರಿಮಿನಲ ಪ್ರಕರಣಗಳು ನಡೆಯುತ್ತಿವೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ನನ್ನ ಮಗ ಮಾಸಪ್ಪ ಹೋಗಿ ಬರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಮಾಸಪ್ಪ ಹಾಗೂ ನಮ್ಮ ಗ್ರಾಮದ ತೀರ್ಥಪ್ಪ ಮ್ಯಾಗಲಮನಿ ಮತ್ತು ಬಸಪ್ಪ ಮ್ಯಾಗಲಮನಿ ರವರರೊಂದಿಗೆ ಸೇರಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನಾಗಲಿ , ನನ್ನ ಮಕ್ಕಳಾಗಲಿ ಯಾವತ್ತೂ ಸ್ವಾಧೀನ ಇರುವುದಿಲ್ಲ ಅವುಗಳಲ್ಲಿ ಪ್ರತಿವಾದಿ 3 ರಿಂದ 7 ರವರೆ ಸ್ವಾಧೀನ ಅನುಭೋಗ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**